441(1113)ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ರೇಷ್ಮೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರೇಷ್ಮೆ ಇಲಖೆಯಲ್ಲಿರುವ ಬೆಳವಣಿಗೆ ಕೇಂದ್ರಗಳು ಎಷ್ಟು: ಈ ಕೇಂದ್ರಗಳನ್ನು ಸ್ಥಾಪಿಸಲು ಖರ್ಚಾದ ಮೊತ್ತವೆಷ್ಟು;

ಆ) ಈ ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುವುದೇ: ಹೌದಾದಲ್ಲಿ ವಿವರ ನೀಡುವುದು:

ಇ) ಕಾರ್ಯನಿರ್ವಹಿಸದಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು? ಹಾಗೂ ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ. ಚೆನ್ನಿಗಪ್ಪ(ರೇಷ್ಮೆ ಸಚಿವರು) :

ಅ) ಬೆಳವಣಿಗೆ ಕೇಂದ್ರಗಳು 7 (ಏಳು). ಈ ಕೇಂದ್ರಗಳನ್ನು ಸ್ಥಾಪಿಸಲು ಖರ್ಚಾದ ಒಟ್ಟು ಮೊತ್ತ ರೂ. 1122.76 ಲಕ್ಷಗಳು.

ಆ) – ಇಲ್ಲ –

ಇ) ಹೊಸ ಪ್ರದೇಶಗಳಲ್ಲಿ ರೇಷ್ಮೆ ಬೆಳೆಗಾರರು ಉತ್ಪಾದಿಸಿದ ಗೊಡುಗಳನ್ನು ಸಾಂಪ್ರದಾಯಿಕ ಪ್ರದೇಶದ ರೇಷ್ಮೆ ಗೂಡು ಮಾರುಕಟ್ಟೆಗಳಿಗೆ ತರುವ ಕಷ್ಟವನ್ನು ತಪ್ಪಿಸಲು ಹಾಗೂ ಪ್ರದೇಶದಲ್ಲಿ ನೂಲು ಬಿಚ್ಚಾಣಿಕೆ ಕಾರ್ಯಕ್ಕೆ ಚಾಲನೆ ನೀಡಲು ಈ ಕೇಂದ್ರಗಳನ್ನು ಸ್ಥಾಪಿಸಲಾಯಿತು. ರೇಷ್ಮೆ ನೂಲು ಬಿಚ್ಚುವ ಉದ್ದೇಶ ಒಂದೇ ಆದಲ್ಲಿ ಲಾಭದಾಯಕವಾಗುವುದಿಲ್ಲ. ಅದರೊಂದಿಗೆ ಹುರಿ ಮಾಡುವುದು ಮತ್ತು ಬಟ್ಟೆ ಮಾಡುವುದು ಸೇರಿದಲ್ಲಿ ಕಚ್ಚಾ ರೆಷ್ಮೆಯ ಮೌಲ್ಯ ವರ್ಧನೆಯಾಗಿ ಇವುಗಳನ್ನು ವಹಿಸಿಕೊಳ್ಳುವ ಉದ್ದಿಮೆಶೀಲರಿಗೆ ಲಾಭದಾಯಕವಾಗುವುದು ಎಂಬ ಅಭಿಪ್ರಾಯದಿಂದ ಈ ಕೇಂದ್ರಗಳನ್ನು ಸ್ಥಾಪಿಸಲಾಯ್ತು. ಖಾಸಗಿ ಉದ್ದಿಮೆಗಳವರು ಅಗಾಧವಾದ ಬಂಡವಾಳವನ್ನು ಹೂಡಲು ಅಶಕ್ತರಾಗಿದ್ದರಿಂದ ಸರ್ಕಾರದಿಂದ ಈ ಸೌಲಭ್ಯಗಳನ್ನು ಒದಗಿಸಿ ಖಾಸಗಿಯವರಿಗೆ ನೀಡುವ ಉದ್ದೇಶ ಹೊಂದಲಾಯಿತ್ತು. ಈ ದಿಶೆಯಲ್ಲಿ ಅವುಗಳ ಸ್ಥಾಪನೆಯಾದ ನಂತರ 1997–98ರಲ್ಲಿ ಟೆಂಡರ್ ಕಮ್ ಆಕ್ಷನ್ ಮೇಲೆ ಪ್ರಕ್ರಿಯೆ ಚಾಲನೆಗೊಳಿಸಿದರೂ ಸಹ ಯಾವುದೇ ಖಾಸಗಿ ಉದ್ಯಮಶೀಲರಿಂದ ಟೆಂಡರ್‌ಗೆ ಸಕಾರಾತ್ಮಕ ಪ್ರತಿಕ್ರಿಯೆ ದೊರೆತಿರುವುದಿಲ್ಲ.

2002–03ನೇ ಸಾಲಿನಲ್ಲಿ ಮತ್ತೊಮ್ಮೆ ಟೆಂಡರ್ ನಿಬಂಧನೆಗಳನ್ನು ಸಡಿಲಿಸಿ ಬೆಳವಣಿಗೆ ಕೇಂದ್ರಗಳನ್ನು ಬಾಡಿಗೆ: ಲೀಸ್ ಆಧಾರದ ಮೇಲೆ ನೀಡಲು ಟೆಂಡರ್ ಪ್ರಕ್ರಿಯೆಯನ್ನು ನಡೆಸಲಾಯಿತು ಹಲವಾರು ಟೆಂಡರ್‌ದಾರರು ಪ್ರಕ್ರಿಯಯಲ್ಲಿ ಭಾಗವಹಿಸಿದರೂ ಸಹ ಇ ಎಂ ಡಿ ಹಣವನ್ನು ನೀಡದೇ ಇರುವ ಹಿನ್ನಲೆಯಲ್ಲಿ ಟೆಂಡರ್ ಪ್ರಕ್ರಯೆ ಫಲಪ್ರದವಾಗಿರುವುದಿಲ್ಲ. ಬೆಳವಣಿಗೆ ಕೇಂದ್ರಗಳಲ್ಲಿನ ಯಂತ್ರೋಪಕರಣಗಳನ್ನು ಉಪಯೋಗಕ್ಕೆ ಹಚ್ಚುವ ದೃಷ್ಟಿಯನಿಟ್ಟುಕೊಂಡು ಬೆಳಗಾಂ ಜಿಲ್ಲೆಯ ತಿಗಡಿ ಮತ್ತು ಬಿಜಾಪುರ ಜಿಲ್ಲೆಯ ನವರಸಪುರದಲ್ಲಿರುವ ನೇಯ್ಗೆ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಅನ್ವಯ ಸ್ಥಳೀಯ ನೇಕಾರರ ಸಹಕಾರ ಸಂಘಗಳಿಗೆ ನೀಡುವ ಪ್ರಸ್ತವನೆ ಪರಿಶಿಲನೆಯಲ್ಲಿದೆ. ಏತನ್ಮಧ್ಯೆ ಕರ್ನಾಟಕ ವಿದ್ಯುತ್ ಚಾಲಿತ ನೇಯ್ಗೆ ಅಭಿವೃದ್ಧಿ ನಿಗಮವು ಈ ಬೆಳವಣಿಗೆ ಕೇಂದ್ರ ಗಳಲ್ಲಿರುವ ನೇಯ್ಗೆ ಉಪಕರಣಗಳನ್ನು ತಮ್ಮ ಸಂಸ್ಥೆಗೆ ಹಸ್ತಾಂತರಿಸಲು ಕೋರಿದ್ದು. ಈ ಪ್ರಸ್ತಾವನೆಯೂ ಸಹ ಪರಿಶೀಲನೆಯಲ್ಲಿದೆ.

ಈ ಬೆಳವಣಿಗೆ ಕೇಂದ್ರಗಳನ್ನು ರಾಜ್ಯದ ಉತ್ತರ ಕರ್ನಾಟಕ ಭಾಗದಲ್ಲಿ ರೇಷ್ಮೆಕೃಷಿಯ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಅಲ್ಲಿನ ರೈತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಮತ್ತು ಉದ್ಯೋಗಾವಕಾಶವನ್ನು ಕಲ್ಪಿಸಲು ಸ್ಥಾಪಿಸಲಾಯಿತೆ ಹೊರತು ಯಾವುದೇ ದುರುದ್ದೇಶವಿಟ್ಟು ಮಾಡಿದುದಲ್ಲ. ಆದುದರಿಂದ ಅದಿಕಾರಿಗಳ ವಿರುದ್ಧ ಕ್ರಮ ಜರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

442(1114) ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ರೇಷ್ಮೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೆ.ಎಸ್.ಐ.ಸಿ ಮತ್ತು ಕೆ.ಎಸ್.ಎಂ.ಬಿ ಸಂಸ್ಥೆಗಳು ನಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ನಷ್ಟದಲ್ಲೆರುವುದಕ್ಕೆ ಕಾರಣಗಳೇನು?

ಆ) ಹಾಗಿದಲ್ಲಿ, ಸರಿಪಡಿಸಲು ಸರ್ಕಾರ ತೆಗೆದುಕೊಂಡು ಕ್ರಮಳೇನು?

ಶ್ರೀ ಸಿ. ಚನ್ನಿಗಪ್ಪ (ರೇಷ್ಮೆ ಸಚಿವರು) :

ಅ) ಹೌದು

ಆ) ಕೆ.ಎಸ್.ಐ.ಸಿ:

1) ದುಡಿಯುವ ಬಂಡವಾಳದ ಕೊರತೆ

2) ಹುಚ್ಚುವರಿ ಮಾನವ ಸಂಪನ್ಮೂಲ

3) ಹೆಚ್ಚಾದ ಮೇಲ್ವೆಚ್ಚಗಳು

4) ಕಚ್ಚಾ ಸಾಮಗ್ರಿಗಳ ಕೊಂತೆ

5) ಜೊಟು ರೇಷ್ಮೆ ಗಿರಣಿಯ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ನಿರೀಕ್ಷಿತ ಬೆಲೆ ಸಿಗದೇ ಇರುವುದು.

ಕೆ.ಎಸ್.ಎಂ.ಬಿ:

ರೇಷ್ಮೆ ನೂಲಿನ ಬೆಲೆ ಸ್ಥಿರೀಕರಣ ಕಾರ್ಯಕ್ಕಾಗಿ ಮಾರುಕಟ್ಟೆ ಮಧ್ಯೆ ಪ್ರವೇಶ ಮಾಡಿ ಖರಿದಿಸಿದ ರೇಷ್ಮೆ ನೊಲಿನಲ್ಲಿ ಆರ್ಥಿಕ ವರ್ಷದ ಅಂತ್ಯದಲ್ಲಿ ಉಳಿಸಿಕೊಂಡಿದ್ದ ರೇಷ್ಮೆ ನೂಲಿನ ದಾಸ್ತಾನನ್ನು ವಾರ್ಷಿಕ ಲೆಕ್ಕ ಪತ್ರವನ್ನು ತಯಾರಿಸುವಾಗ ತದ್ದುಪಡಿಯಾದ ಕಂಪನಿಗಳ ಕಾಯಿದೆಯನ್ವಯ ಕಡ್ಡಾಯವಾಗಿರುವ ಮೂಲ ಅಸಲು ಬೆಲೆ ಅಥವಾ ಆರ್ಥಿಕ ವರ್ಷದ ಅಂತ್ಯಕ್ಕೆ ಇರುವ ಮಾರುಕಟ್ಟೆ ಬೆಲೆ ಇವುಗಳೆರಡರಲ್ಲಿ ಯಾವುದು ಕಡಿಮೆಯೋ ಅದರಂತೆ ಮೌಲ್ಯ ಮಾಪನ ಮಾಡಿರುವುದರಿಂದಾಗಿ ಹಾಗೂ ಆಡಳಿತಾತ್ಮಕ ವೆಚ್ಚವೂ ಸೇರಿ ನಷ್ಟ ಉಂಟಾಗಿದೆ.

ಆ) ಕೆ.ಎಸ್.ಐ.ಸಿ.ಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ : ಡಿಡಿಪಿಇಆರ್:61:ಎಆರ್.ಯು:2000,ದಿನಾಂಕ 28.8.03ರನ್ವಯ ಕೆ.ಎಸ್.ಐ.ಸಿ.ಯ ಪುನಶ್ಚೇತನ ಬಗ್ಗೆ ಆದೇಶ ಹೊರಡಿಸಿದ್ದು, ಅದರ ರೂಪುರೇಶಗಳು ಕೆಳಕಂಡಂತಿವೆ:

1) ಜೂಟು ರೇಷ್ಮೆ ಗಿರಣಿ, ಚನ್ನಪಟ್ಟಣ ಹಾಗೂ ರೇಷ್ಮೆ ನೂಲು ತೆಗೆಯುವ ಘಟಕ, ಕನಕಪುರದ ಎಲ್ಲಾ ಕಾರ್ಮಿಕ ಸಿಬ್ಬಂದಿಗಳಿಗೆ ಸ್ವಯಂ ನಿವೃತ್ತಿ ಗೊಳಿಸಿ ಕೆ.ಎಸ್.ಐ.ಸಿ. ಯಿಂದ ಸದರಿ ಘಟಕಗಳನ್ನು ಬೇರ್ಪಡಿಸಿ ಮುಚ್ಚುವುದು.